ತಿಳಿದು ತುಂಬಾ ದುಃಖವಾಯಿತು.

ನಾನು ಹಿಂದಕ್ಕೆ ಹೊರಳಿ ನನ್ನ ಜೀವನವನ್ನು ನೋಡಿದಾಗ, ವಾಸ್ತವವಾಗಿ ಭಾವನಾತ್ಮಕವಾಗಿ ನೀನಾ ಮತ್ತು ನನ್ನ ಸಂಬಂಧ ಎಂದೋ ಕೊನೆಗೊಂಡಿತ್ತು, ಅವಳಿಗೆ ಪೀಟರ್ ಸೂಕ್ತ ಸಮಯದಲ್ಲಿ ಸಿಕ್ಕಿದ. ನಾನು ವ್ಯರ್ಥವಾಗಿ ಪೀಟರನನ್ನು ದೋಷಿಯೆಂದು ತಿಳಿಯಬಾರದು. ನನ್ನಲ್ಲಿಯೇ ಕೊರತೆಯಿದೆ. ನಾನು ಐವತ್ತನೆಯ ವಯಸ್ಸನ್ನು ದಾಟಿದ್ದಾಗ್ಯೂ ಅನೇಕ ವಿಷಯಗಳಲ್ಲಿ ಮೂರ್ಖನಾಗಿದ್ದೇನೆ. ಜನ ಹೇಗಿರುತ್ತಾರೆ, ಅವರನ್ನು ಹೇಗೆ ನಿಭಾಯಿಸಬೇಕು ಎಂಬುದು ನನಗೆ ತಿಳಿದಿಲ್ಲ. ನಾನು ಜಗತ್ತಿನ ಅನೇಕ ರೀತಿ ನೀತಿಗಳ ಬಗ್ಗೆ ಇನ್ನೂ ಅಪರಿಚಿತ. ಹೀಗಾಗಿ ಜನ ನನ್ನ ಬಗ್ಗೆ ಬೇಗ ಕೋಪಿಸಿಕೊಳ್ಳುತ್ತಾರೆ. ಆದರೆ ಅಂದು ನನಗೆ ನೀನಾಳ ಫೋನ್ ಬಂತು. ನನಗೆ ಆಶ್ಚರ್ಯವಾಯಿತು. ನಾನು ಸ್ಕಾಟ್ಲೆಂಡಿನಲ್ಲಿ ನನ್ನ ಒಂದೂವರೆ ತಿಂಗಳ ಬೇಸಿಗೆ ರಜಾಗಳನ್ನು ಕಳೆದು ಕೋಪನ್‌ಹೇಗನ್‌ಗೆ ಮರಳಿ ಬಂದಿದ್ದೆ, ನನ್ನ ಸೂಟ್‌ಕೇಸ್ ಖಾಲಿ ಮಾಡಿ ಬಟ್ಟೆಗಳನ್ನು ಹಳೆಯ ಜಾಗದಲ್ಲಿಡುತ್ತಿದ್ದೆ.

ನಾನು ನೀನಾಳ ಧ್ವನಿಯನ್ನು ಗುರುತಿಸದಾದೆ; ಅವಳ ಸ್ವರ ಅಷ್ಟು ಮಂದವಾಗಿತ್ತು.

'ನೀನಾ ಮಾತಾಡ್ತಿದ್ದೇನೆ.'

'ನೀನಾ?'

'ಹೌದು, ಹೇಗಿದ್ದೀರ?'

'ಚೆನ್ನಾಗಿದ್ದೇನೆ. ಇಂದೇ ಸ್ಕಾಟ್ಲೆಂಡಿನಿಂದ ವಾಪಸ್ ಬಂದಿದ್ದೇನೆ, ಒಂದು ಗಂಟೆಯಾಗಿದೆ ಅಷ್ಟೆ. ನಾಳೆಯಿಂದ ಶಾಲೆ ಓಪನ್ ಆಗುತ್ತೆ' ಎಂದೆ.

ನಿಮ್ಮ ತಾಯಿ, ಸಹೋದರಿ ಮತ್ತು ಮಕ್ಕಳು ಹೇಗಿದ್ದಾರೆ ಎಂದು ನೀನಾ ಕೇಳಿದಳು.

'ಎಲ್ಲರೂ ಚೆನ್ನಾಗಿದ್ದಾರೆ. ಅಮ್ಮನೊಂದಿಗೆ ಗ್ಲಾಸ್ಗೋದಲ್ಲಿ ನಾಲ್ಕು ದಿನಗಳಿದ್ದೆ. ಸಹೋದರಿ–ಸಹೋದರರನ್ನು ಭೇಟಿಯಾದೆ. ಲೂಸಿ ಮತ್ತು ಗ್ರೇಸಿಯೊಂದಿಗೆ ಸಮ್ಮರ್ ಹೌಸಿನಲ್ಲಿ ಒಂದು ತಿಂಗಳು ಕಳೆದೆ. ವಿಲಿಯಮ್, ಅಲ್ಬರ್ಟ್ ಮತ್ತು ಜೂಲಿಯಾ ತಮ್ಮ ತಮ್ಮ ಪರಿವಾರದೊಂದಿಗೆ ಅಲ್ಲಿಗೇ ಬಂದರು. ಸಮಯ ತುಂಬಾ ಚೆನ್ನಾಗಿ ಕಳೀತು' ಎಂದೆ.

'ತುಂಬಾ ಸಂತೋಷ' ನೀನಾ ಉಸುರಿದಳು.

'ಅಲ್ಲಿಯ ಮೂರು ಶಾಲೆಗಳಲ್ಲಿ ಜಾಬ್ ಇಂಟರವ್ಯೂ ಸಹ ಕೊಟ್ಟಿದ್ದೇನೆ.'

'ಓಹ್... ಏಕೆ? ಸ್ಕಾಟ್ಲೆಂಡಿಗೆ ಹೋಗೋ ವಿಚಾರವಿದೆಯೇ?'

'ಹೌದು, ಒಂದು ವೇಳೆ ಅಲ್ಲಿ ನೌಕರಿ ಸಿಕ್ಕರೆ... ಈಗ ಇಲ್ಲಿದ್ದು ಏನು ಮಾಡುವುದು?' ನಾನು ಉದಾಸೀನದಿಂದ ಹೇಳಿದೆ.

ಅತ್ತ ಕಡೆ ನೀನಾ ಮೌನ ತಾಳಿದ್ದಳು. ನನಗೆ ಅವಳ ಧ್ವನಿ ಮತ್ತು ಉಸಿರಿನಲ್ಲಿ ರೋಗಲಕ್ಷಣದ ಆಭಾಸವಾಯಿತು.

'ನೀನಾ, ಹೇಗಿದ್ದೀಯ?'

'ಚೆನ್ನಾಗಿಲ್ಲ' ನೀನಾ ಕೆಮ್ಮಿದಳು.

'ಏನಾಯ್ತು?'

'ಟ್ಯೂಮರ್'

'ಟ್ಯೂಮರ್? ಅಪಾಯವಂತೂ ಇಲ್ಲವಲ್ಲ?'

'ಹೌದು, ಅಪಾಯವಿದೆ... ಅಡ್ವಾನ್ಸ್ ಸ್ಟೇಜ್‌ನಲ್ಲಿದೆ. ಸಾಕಷ್ಟು ಹರಡಿದೆ...'

ನೀನಾ ತುಂಬಾ ಸ್ಪಷ್ಟವಾಗಿ ಮತ್ತು ನೇರವಾಗಿ ತನ್ನ ಪ್ರಾಣಹರಣ ಮಾಡುವ ರೋಗದ ಬಗ್ಗೆ ಹೇಳಿದಳು. ರೋಗಗಳ ರಾಜ ಕ್ಯಾನ್ಸರ್ ಅವಳ ಶರೀರದಲ್ಲಿ ಆಕ್ರಮಣವೆಸಗಿತ್ತು. ನಾನು ಮೂಕನಾಗಿದ್ದೆ. ಮೆಲೈನ್ ಟ್ಯೂಮರ್ ನಿಯಂತ್ರಣಕ್ಕೆ ಬರುವುದಿಲ್ಲ. ನನಗೆ ನೀನಾಳ ಬಗ್ಗೆ ಸಹಾನುಭೂತಿಯುಂಟಾಯಿತು. ನಾನು ಅವಳೊಂದಿಗೆ ಎಂಟು ವರ್ಷಗಳನ್ನು ಕಳೆದಿದ್ದೆ. ಅವಳೊಂದಿಗೆ ಅನೇಕ ಮಧುರ ಕ್ಷಣಗಳನ್ನು ಅನುಭವಿಸಿದ್ದೆ. ನಮ್ಮ ಸಹಜೀವನ ಸಾಕಷ್ಟು ಖುಷಿಗೆ ಸಾಕ್ಷಿಯಾಗಿತ್ತು.

ನೀನಾ ನನ್ನನ್ನು ಬೇರೊಂದು ಲೋಕಕ್ಕೆ ಕರೆದೊಯ್ದಿದ್ದಳು. ಅವಳೊಂದಿಗೆ ಅಮೆರಿಕ, ಸ್ಪೇನ್, ಗ್ರೀಸ್, ಥಾಯ್ಲೆಂಡ್, ಚೀನಾ ಮತ್ತು ಇಂಡಿಯಾ ಹೀಗೆ ಅನೇಕ ದೇಶಗಳಿಗೆ ಪ್ರಯಾಣ ಮಾಡಿದ್ದೆ. ನೀನಾಳೇ ಮೊದಲ ಬಾರಿಗೆ ನನಗೆ ಭಾರತದ ಪ್ರವಾಸವನ್ನು ಮಾಡಿಸಿದ್ದಳು.

ನೀನಾಳಿಗೆ ನನ್ನ ಅಗತ್ಯವಿದೆ ಎಂದು ನನಗೆ ಅನ್ನಿಸಿತು. ಅದಕ್ಕೇ ನನಗೆ ಫೋನ್ ಮಾಡುತ್ತಿದ್ದಾಳೆ. ಪರಸ್ಪರ ಸಹಾಯ ಮಾಡುವಲ್ಲಿನ ಸುಖವೇ ಸುಖ!

'ನೀನಾ, ನಾನು ನಿನ್ನನ್ನು ಭೇಟಿಯಾಗಲು ಬಯಸುತ್ತೇನೆ' ಎಂದೆ.

ಅವಳು ಒಂದು ಕ್ಷಣ ಯೋಚಿಸಿ ಹೇಳಿದಳು, 'ಸರಿ, ಎಲ್ಲಿ ಭೇಟಿಯಾಗಲು ಬಯಸುವಿರಿ?'

'ಅದೇ ಟಿವೋಲಿ ಗಾರ್ಡನ್ ಎದುರಿನ ಸ್ಟಾರ್‌ಬಕ್ಸ್ ಕಾಫಿ ಹೌಸಿನಲ್ಲಿ.'

ನೀನಾ ಸ್ಟಾರ್‌ಬಕ್ಸ್ ಕಾಫಿ ಹೌಸಿಗೆ ಬಂದಾಗ ನಾನು ಅವಳನ್ನು ನೋಡುತ್ತಾ ನಿಂತುಬಿಟ್ಟೆ. ಅವಳನ್ನು ಗುರುತಿಸುವುದು ಕಷ್ಟವಾಯಿತು. ತುಂಬಾ ಬದಲಾಗಿದ್ದಳು. ಅವಳ ಸುಂದರ ಕಣ್ಣುಗಳು ಕಪ್ಪು ಹೊಂಡಗಳಲ್ಲಿ ಹೂತುಹೋಗಿದ್ದವು. ತಲೆಯ ಕೂದಲುಗಳು ಉದುರಿ ಹೋಗಿದ್ದವು. ಅವಳ ಬೋಳುತಲೆ ಎದ್ದು ಕಾಣುತ್ತಿತ್ತು. ಅವಳು ತನ್ನ ತಲೆಯ ಮೇಲೆ ಒಂದು ಬಿಳಿ ಬಟ್ಟೆಯನ್ನು ಕಟ್ಟಿಕೊಂಡಿದ್ದಳು. ಆದರೂ ಅವಳು ಸುಂದರವಾಗಿದ್ದಳು. ನಾವಿಬ್ಬರು ಒಟ್ಟಿಗೆ ಕಾಫಿ ಕುಡಿದೆವು. ಪರಸ್ಪರ ಕ್ಷೇಮ ಸಮಾಚಾರ ವಿಚಾರಿಸಿಕೊಂಡೆವು. ನೀನಾಳ ಆರೋಗ್ಯದ ಬಗ್ಗೆಯೇ ಹೆಚ್ಚು ಮಾತುಕತೆ ನಡೆಯಿತು.

'ನನಗೆ ಫಸ್ಟ್ ಕ್ಲಾಸ್ ರೋಗ ತಗುಲಿದೆ' ಅವಳು ಮಂದ ಮುಗುಳ್ನಗೆಯೊಂದಿಗೆ ಹೇಳಿದಳು. ನಾನು ಬೇರೆಡೆಗೆ ಮುಖ ಮಾಡಿದೆ, ನನ್ನಿಂದ ಮಾತನಾಡಲು ಸಾಧ್ಯವಾಗಲಿಲ್ಲ. ಅವಳ ಕಣ್ಣುಗಳಲ್ಲಿ ನನ್ನ ಕಣ್ಣುಗಳನ್ನು ಬೆರೆಸದಾದೆ.

ಮೌನ ಇಬ್ಬರಲ್ಲೂ ಕವಿಯಿತು.

ಅವಳು ಏನೋ ಯೋಚಿಸುತ್ತಾ ಹೇಳಿದಳು, 'ನನಗೆ ಶಿಕ್ಷೆ ಲಭಿಸಿದೆ.'

'ಯಾವುದಕ್ಕೆ?' ನಾನು ಅವಳನ್ನೇ ನೋಡುತ್ತಾ ಕೇಳಿದೆ.

'ನನ್ನ ತಪ್ಪುಗಳಿಗೆ...'

'ತಪ್ಪು ನಮ್ಮೆಲ್ಲರಿಂದಲೂ ಆಗುತ್ತದೆ, ಆದರೆ ಕಡಿಮೆ ಜನ ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುತ್ತಾರೆ.'

'ಅದೆಷ್ಟೋ ಬಾರಿ ದೇವರು ಮನುಷ್ಯನಿಗೆ ಅವನ ತಪ್ಪುಗಳನ್ನು ಒಪ್ಪಿಕೊಳ್ಳುವಂತೆ ಮಾಡುತ್ತಾನೆ...'

ನನಗೆ ನೀನಾ ತುಂಬಾ ಅಸಹಾಯಕಳಾಗಿ ಕಂಡಳು.

ನಾನು ಸಾಮಾನ್ಯವಾಗಿ ನಿತ್ಯ ಅವಳ ಕ್ಷೇಮ ಸಮಾಚಾರವನ್ನು ಕೇಳಲಾರಂಭಿಸಿದೆ. ಒಮ್ಮೆ ಫೇಸ್ ಟೈಮ್ ಮಾಡಿದರೆ, ಇನ್ನೊಮ್ಮೆ ಫೇಸ್‌ಬುಕ್‌ನಲ್ಲಿ ಮೆಸೇಜ್ ಕಳುಹಿಸುತ್ತಿದ್ದೆ. ಆರಂಭದಲ್ಲಿ ಅವಳು ನನ್ನನ್ನು ಭೇಟಿಯಾಗುತ್ತಿದ್ದಳು, ನನ್ನೊಂದಿಗೆ ಮಾತುಕತೆ ಮತ್ತು ಚಾಟಿಂಗ್ ಸಹ ಮಾಡಿದಳು. ನಂತರ ಅವಳು ನನ್ನಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಳು. ಪೀಟರ್ ನನ್ನನ್ನು ಇಷ್ಟಪಡುತ್ತಿಲ್ಲ. ನೀವು ನನ್ನನ್ನು ಸಂಪರ್ಕಿಸಬೇಡಿ...'

ನಾನು ವಿಧಿಯಿಲ್ಲದೆ ಮೌನವಹಿಸಿದೆ. ಆದರೆ ಅವಳ ಆರೋಗ್ಯದ ಬಗ್ಗೆ ತಿಳಿಯುವ ನನ್ನ ಕಾತರ ನಿರಂತರ ಹೆಚ್ಚುತ್ತಿತ್ತು. ಹೀಗಾಗಿ ಕೆಲವು ದಿನಗಳ ಮೌನದ ನಂತರ ಮತ್ತೆ ಅವಳನ್ನು ಸಂಪರ್ಕಿಸುತ್ತಿದ್ದೆ. ನಾವು ಮತ್ತೆ ಮತ್ತೆ ಭೇಟಿಯಾದೆವು. 'ನೀವು ನನ್ನನ್ನು ಭೇಟಿಯಾಗಬೇಡಿ, ನನಗೆ ಫೋನ್ ಮಾಡಬೇಡಿ, ಪೀಟರ್‌ಗೆ ಇದೆಲ್ಲಾ ಇಷ್ಟವಾಗಲ್ಲ' ಎಂದು ನೀನಾ ಮತ್ತೆ ಮತ್ತೆ ಹೇಳುತ್ತಿದ್ದಳು. ನಾನು ಮತ್ತೆ ಮೌನ ವಹಿಸುತ್ತಿದ್ದೆ. ಆದರೆ ಕೆಲವು ದಿನಗಳ ಮೌನದ ನಂತರ ಮತ್ತೆ ಅದೇ ಪುನರಾವೃತ್ತಿ.

ಬಹುಶಃ ನೀನಾಳಿಗೂ ನನ್ನನ್ನು ಭೇಟಿಯಾಗುವುದು, ನನ್ನ ಫೋನನ್ನು ನಿರೀಕ್ಷಿಸುವುದು ಇಷ್ಟವಾಗುತ್ತಿತ್ತು. ನಾನು ವರ್ಷಗಳ ಕಾಲ ಅವಳೊಂದಿಗೆ ಯಾವ ಅಡೆತಡೆಯಿಲ್ಲದೆ ಇದ್ದೆ, ಈಗ ಕದ್ದುಮುಚ್ಚಿ ಅವಳನ್ನು ಭೇಟಿಯಾಗುತ್ತಿದ್ದೆ. ನಾವು ಯಾರಿಗೂ ತಿಳಿಯದಂತೆ ಫೋನ್‌ನಲ್ಲಿ ಮಾತನಾಡುತ್ತಿದ್ದೆವು, ಎಸ್‌ಎಮ್‌ಎಸ್ ಮಾಡಿಕೊಳ್ಳುತ್ತಿದ್ದೆವು. ಯುವಕ–ಯುವತಿಯರಂತೆ ಫೇಸ್‌ಬುಕ್‌ನಲ್ಲಿ ಚಾಟಿಂಗ್ ಮಾಡುತ್ತಿದ್ದೆವು. ಯಾವ ಸಂಬಂಧವನ್ನು ಗುಪ್ತವಾಗಿಟ್ಟುಕೊಳ್ಳಬೇಕೋ, ಆ ಸಂಬಂಧವನ್ನು ಇಟ್ಟುಕೊಳ್ಳಬಾರದೆಂದು ಹೇಳಲಾಗುತ್ತದೆ. ಆದರೆ ನಾನೇನು ತಾನೇ ಮಾಡಲಿ? ನೀನಾಳ ಮೇಲೆ ಈಗ ಪೀಟರ್‌ನ ಅಧಿಕಾರವಿತ್ತು. ನಾನು ಪೀಟರ್‌ನನ್ನು ಮೂರ್ನಾಲ್ಕು ಬಾರಿ ಭೇಟಿಯಾಗಿದ್ದೆ. ಅವನ ನೀಳಕಾಯ ಮತ್ತು ಸುಂದರ ಆಕಾರ ನೋಡಿ ಪ್ರಭಾವಿತನಾಗಿದ್ದೆ. ಆದರೆ ಅವನಲ್ಲಿ ಒಂದು ವಿಧದ ಅಹಂಕಾರವಿರುವುದನ್ನು ಸಹ ಮನಗಂಡೆ. ಈ ಬಗ್ಗೆ ನೀನಾಳಿಗೆ ಹೇಳಿದಾಗ ಅವಳು ನಗುತ್ತಾ ಹೇಳಿದಳು, 'ಅವನೊಬ್ಬ ಶೋಕಿ ಮನುಷ್ಯ'.

ಪೀಟರ್ ದಷ್ಟಪುಷ್ಟ ವ್ಯಕ್ತಿಯಾಗಿದ್ದ. ಅವನಿಗೆ ರೂಪ ಮತ್ತು ಅಂತಸ್ತು ಎರಡೂ ಇದ್ದವು; ಈ ವಿಷಯದಲ್ಲಿ ಅವನು ನನಗಿಂತ ಉತ್ತಮ ವ್ಯಕ್ತಿಯಾಗಿದ್ದ. ಆ ಮಹಾಕಾಯ ವ್ಯಕ್ತಿಯೆದುರು ನನ್ನನ್ನು ಹೀನ ಮತ್ತು ಕುಬ್ಜನೆಂದು ತಿಳಿಯುತ್ತಿದ್ದೆ. ನನ್ನ ಮತ್ತು ನೀನಾಳ ಅಗಲುವಿಕೆಗೆ ಪೀಟರ್ ಕಾರಣವಾಗಿದ್ದನೆ? ಆ ಜಾದೂಗಾರ ತನ್ನ ರೂಪದಿಂದ ನೀನಾಳನ್ನು ಆಕರ್ಷಿಸಿದ್ದರಿಂದ ನೀನಾ